ಓ ಎಸ್ ನಂಃ 367-19
ಪಿ ಡಬ್ಲ್ಯೂ ಃ 1

ದಿಃ 07.03.2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆಃ ವಾದಿ ಪರ ಕು. ಶಿಲ್ಪಶ್ರೀ ವಕೀಲರಿಂದ

11. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರಿಕೆ ಸಲ್ಲಿಸಿರುತ್ತೇನೆ. ಅದರಲ್ಲಿರುವ ಎಲ್ಲಾ ವಿಚಾರಗಳು ಸತ್ಯವಾಗಿರುತ್ತದೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ. ಸದರಿ ಪ್ರಮಾಣ ಪತ್ರಿಕೆಯನ್ನು ನನ್ನ ಮುಖ್ಯ ವಿಚಾರಣೆ ಎಂದು ತೆಗೆದುಕೊಳ್ಳಬೇಕು ಎಂದು ಕೋರುತ್ತೇನೆ.

12. ದಿಃ19.05.2014 ರ ನೋಂದಾಯಿತ ಕ್ರಯದ ಮುಂಗಡ ಕರಾರು ಪತ್ರವನ್ನು ನೋಡುತ್ತಿದ್ದು ಅದನ್ನು ನಿಪಿ1 ಎಂದು, ಅದಕ್ಕೆ 1ನೇ ಪ್ರತಿವಾದಿ ಪ್ರತಿ ಪುಟಕ್ಕೆ ಸಹಿ ಮಾಡಿದ್ದು, ಕೊನೆ ಪುಟದಲ್ಲಿರುವ ಅವರ ಎರಡು ಸಹಿಗಳನ್ನು ಕ್ರಮವಾಗಿ ನಿಪಿ1ಎ ಮತ್ತು ನಿಪಿ1ಬಿ ಎಂದು, ನನ್ನ ಸಹಿಯನ್ನು ನಿಪಿ1ಸಿ ಎಂದು, ನೋಟೀಸಿನ ಪ್ರತಿಯನ್ನು ನಿಪಿ2 ಎಂದು, ಪ್ರತ್ಯುತ್ತರ ನೋಟೀಸನ್ನು ನಿಪಿ3 ಎಂದು, ಮೂರು ಅಂಚೆ ಸ್ವೀಕೃತಿಗಳನ್ನು ಕ್ರಮವಾಗಿ ನಿಪಿ4 ರಿಂದ ನಿಪಿ6 ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಗಾಗಿ ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಓ

ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,
ಮಾಗಡಿ.